**<u>ದಿನಾಂಕಃ 14.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ- ಪ್ರತಿವಾದಿಗಳ ಪರ ಶ್ರೀ ಎಲ್.ಎ., ವಕೀಲರಿಂದ</u>**

1) ಸರ್ವೆ ನಂ. 161 ರಲ್ಲಿ ಒಟ್ಟು 06 ಹಿಸ್ಸೆಗಳು ಇವೆ. ನಿಪಿ 8 ರ ನಕಾಶೆಯಲ್ಲಿ ತೋರಿಸಿರುವ 2 ರಿಂದ 6 ರವರೆಗಿನ ಹಿಸ್ಸೆಗಳು ನನಗೆ ಸೇರಿದ ಸ್ವತ್ತುಗಳಾಗಿರುತ್ತವೆ. ಸರ್ವೆ ನಂ.161/1 ರ ಜಾಗವು 1 ನೇ ಪ್ರತಿವಾದಿಗೆ ಸೇರಿರುತ್ತದೆ ಎಂದರೆ ಸರಿ. ಸರ್ವೆ ನಂ.161/1 ರಿಂದ 161/6 ರವರೆಗಿನ ಜಮೀನುಗಳ ನಾಲ್ಕು ಮೂಲೆಗಳಲ್ಲಿ ವ್ಯವಸಾಯದ ಜಮೀನುಗಳು ಇವೆ ಎಂದರೆ ಸರಿ. ಸರ್ವೆ ನಂ.161/1 ರ ಜಮೀನು ಮತ್ತು ಅದರ ಸುತ್ತಲೂ ಇರುವ ಜಮೀನುಗಳನ್ನು ಅದರ ಮಾಲೀಕರು ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. ನಾನು ಸರ್ವೆ ನಂ.161/5 ಕ್ಕೆ ಈ ದಾವೆಯನ್ನು ಸಲ್ಲಿಸಿರುತ್ತೇನೆ. ಸದರಿ ದಾವಾ ಆಸ್ತಿಯನ್ನು ನಾನು ದಿಃ 05.12.2016 ರಂದು ಖರೀದಿ ಮಾಡಿರುತ್ತೇನೆ ಎಂದರೆ ಸರಿ. ನಾನು ದಿ ಃ 05.12.2016 ರಂದು ದಾವಾ ಸ್ವತ್ತನ್ನು ಖರೀದಿ ಮಾಡುವ ಪೂರ್ವದಲ್ಲಿ ನನಗೆ ಮಾರಾಟ ಮಾಡಿದ ಮಾರಾಟಗಾರರು ಆ ಸ್ವತ್ತನ್ನು ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. ದಾವಾ ಸ್ವತ್ತು ಮತ್ತು ಅದರ ಸುತ್ತಮುತ್ತಲಿನ ಜಮೀನುಗಳ ಮಾಲೀಕರು ತಮ್ಮ ತಮ್ಮ ಜಮೀನುಗಳನ್ನು ವ್ಯವಸಾಯ ಮಾಡಲು ಇತರೆ ಜಮೀನುಗಳ ಮೇಲೆ ಹಾದು ಹೋಗಬೇಕಾಗುತ್ತದೆ ಎಂದರೆ ಸರಿ.

2) ದಾವಾ ಸ್ವತ್ತಿನ ಮೂಲ ಮಾಲೀಕರು ಸಹ ಈ ಹಿಂದೆ ಬೇರೆ ಜಮೀನುಗಳ ಮೇಲೆ ಹಾದು ಬಂದು ದಾವಾ ಸ್ವತ್ತನ್ನು ಉಳುಮೆ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಸರ್ವೆ ನಂ.161/1 ರಲ್ಲಿ ಇರುವ ನಕಾಶೆ ರಸ್ತೆಯ ಮೇಲೆ ಹಾದು ಹೋಗುತ್ತಿದ್ದರು ಎಂದು ನುಡಿಯುತ್ತಾರೆ. ನಿಪಿ 8 ರ ದಾಖಲೆಯಲ್ಲಿ ಸರ್ವೆ ನಂ.161/1 ರಲ್ಲಿ ನಕಾಶೆ

ರಸ್ತೆ ಇಲ್ಲ ಎಂದರೆ ಸರಿ. ದಾವಾ ಸ್ವತ್ತು ಮತ್ತು ಅದರ ಸುತ್ತ ಮುತ್ತಲೂ ಇರುವ ಜಮೀನುಗಳಿಗೆ ಹಾದು ಹೋಗಲು ಯಾವುದೇ ನಿರ್ದಿಷ್ಟವಾದ ರಸ್ತೆ ಇಲ್ಲ ಎಂದರೆ ಸಾಕ್ಷಿಯು ಸರ್ಕಾರಿ ರಸ್ತೆ ಇದೆ ಎಂದು ನುಡಿಯುತ್ತಾರೆ. ಆ ರೀತಿ ಸರ್ಕಾರಿ ರಸ್ತೆ ಇದೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ದಾವಾ ಸ್ವತ್ತಿಗೆ ನಾನು ಸ್ವತ್ತಿನ ಉತ್ತರ ದಿಕ್ಕಿನಿಂದ ಹೋಗುತ್ತೇನೆ. ನಾನು ದಾವಾ ಸ್ವತ್ತಿಗೆ ಉತ್ತರ ದಿಕ್ಕಿನಿಂದ ಬರಬೇಕಾದಲ್ಲಿ ಬೇರೆ ಬೇರೆ ಜನರ ಜಮೀನುಗಳ ಮೇಲೆ ಹಾದು ಬರಬೇಕು ಎಂದರೆ ಸರಿ. ಸಾಕ್ಷಿಯು ಈಗ ಅಲ್ಲಿ ಹೋಗದಂತೆ ತಡೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಪ್ರಸ್ತುತ ಅಲ್ಲಿ ಓಡಾಡಲು ನನಗೆ ಈರಣ್ಣ, ಮಲ್ಲೇಶ ಮತ್ತು ಸುಶೀಲಮ್ಮರವರು ಅಡ್ಡಿ ಪಡಿಸುತ್ತಿದ್ದಾರೆ. ಸದರಿಯವರು ಆ ರೀತಿ ಅಡ್ಡಿಪಡಿಸಿದ ಕಾರಣ ಸಂಬಂಧಪಟ್ಟ ಇಲಾಖೆಗೆ ಅವರ ವಿರುದ್ದ ಅರ್ಜಿಯನ್ನು ಸಲ್ಲಿಸಿರುತ್ತೇನೆ. ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸುತ್ತೇನೆ.

**ಮುಂದುವರಿದ ಪಾಟೀ ಸವಾಲಿಗೆ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**